

ಬಿಸಿಲು ಬೆಳದಿಂಗಳು

ಡಾ. ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ
swamiji@taralabalu.org

# ಕೊಳ್ಳೆ ಹೋಗುತ್ತಿರುವ ಕಾಡು

"ಊರೆಲ್ಲಾ ಕೊಳ್ಳೆ ಹೋದ ಮೇಲೆ ದಿಡ್ಡಿ ಬಾಗಿಲು ಹಾಕಿದರಂತೆ" ಎಂಬ ಗಾದೆ ಮಾತು ನಮಗೆ ನೆನಪಾಗಿದ್ದು ಮೊನ್ನೆ ಸಿರಿಗೆರೆಯಲ್ಲಿ ವೃಕ್ಷಾರೋಪಣ ಕಾರ್ಯಕ್ರಮ ನಡೆದಾಗ. ಈ ಕಾರ್ಯಕ್ರಮ ಬಹಳ ತುರ್ತಾಗಿ ಏರ್ಪಾಡಾಗಿತ್ತು. ಅದಕ್ಕೆ ಕಾರಣ ಚಿತ್ರದುರ್ಗಕ್ಕೆ ಪಶ್ಚಿಮ ಘಟ್ಟದ ಕಾರ್ಯಪಡೆಯ ಅಧ್ಯಕ್ಷರಾದ ಅನಂತ ಹೆಗಡೆ ಆಶೀಶರ ಆಗಮನ. ಕೆಲವು ದಿನಗಳ ಹಿಂದೆ ಚಿತ್ರದುರ್ಗದ ಅರಣ್ಯ ಇಲಾಖೆಯ ಅಧಿಕಾರಿಯೊಬ್ಬರು ಮಠಕ್ಕೆ ಬಂದು ಹೆಗಡೆಯವರ ಆಗಮನದ ಸುದ್ದಿಯನ್ನು ತಿಳಿಸಿ ವೃಕ್ಷಾರೋಪಣ ಕಾರ್ಯಕ್ರಮವನ್ನು ಏರ್ಪಡಿಸುವ ವಿಚಾರ ಕುರಿತು ಸಮಾಲೋಚನೆ ನಡೆಸಿದರು. ಅವರ ಅಪೇಕ್ಷೆಯಂತೆ ಸಿರಿಗೆರೆಯಲ್ಲಿ ಓದುತ್ತಿರುವ ಸಾವಿರಾರು ವಿದ್ಯಾರ್ಥಿಗಳ ಎದುರಿನಲ್ಲಿ ನಡೆದ ಈ ತುರ್ತು ಕಾರ್ಯಕ್ರಮ ಈ ದೇಶದಲ್ಲಿ ಆಗಬೇಕಾದ ತುರ್ತು ಕಾರ್ಯಕ್ರಮವೂ ಹೌದು. ಇಂತಹ ಕಾರ್ಯಕ್ರಮ ನಮ್ಮ ಮಠಕ್ಕೆ ಹೊಸದೇನೂ ಅಲ್ಲ. ನಮ್ಮ ಗುರುವರ್ಯರಾದ ಲಿಂಗೈಕ್ಯ ಶ್ರೀ ಶಿವಕುಮಾರ ಶಿವಾಚಾರ್ಯ ಮಹಾಸ್ವಾಮಿಗಳವರು ಸ್ವಾತಂತ್ರ್ಯಪೂರ್ವಕಾಲದಿಂದಲೂ ಪ್ರತಿವರ್ಷವೂ ತಪ್ಪದೆ ವನಮಹೋತ್ಸವವನ್ನು ನಡೆಸುತ್ತಿದ್ದರು. ಸಿರಿಗೆರೆಯ ಪ್ರೌಢಶಾಲೆಯಲ್ಲಿ ಓದುವ ಪ್ರತಿಯೊಬ್ಬ ವಿದ್ಯಾರ್ಥಿಯೂ ಒಂದೊಂದು ಸಸಿಯನ್ನು ನೆಟ್ಟು ನೀರೆರೆದು ಪೋಷಿಸುವ ರಚನಾತ್ಮಕ ಕಾರ್ಯಕ್ರಮ ಹಾಕಿಕೊಂಡಿದ್ದರು. ಆಗಿನ ಕಾಲದಲ್ಲಿ ಓದಿದ ಹಿರಿಯ ವಿದ್ಯಾರ್ಥಿಗಳು ಸಿರಿಗೆರೆಗೆ ಬಂದರೆ 'ಇದು ನಾನು ನೆಟ್ಟ ಮರ' ಎಂದು ಕಣ್ಣರಳಿಸಿ ನೋಡಿ ಬೀಗಿ ಹೇಳುತ್ತಾರೆ. ಆಗಿನ ಅವರ ಅಧ್ಯಾಪಕರ ಪಾಠ-ಪ್ರವಚನ, ಅವರು ಕಲಿಸಿದ ಶಿಸ್ತು, ಮಾಡಿದ ತುಂಟಾಟಕ್ಕೆ ಕೊಟ್ಟ ಶಿಕ್ಷೆ ಮೊದಲಾದುವನ್ನು ನೆನೆಸಿಕೊಂಡು ಗದ್ಗದಿತರಾಗುತ್ತಾರೆ.

ಸಿರಿಗೆರೆಯ ಸಮೀಪದಲ್ಲಿ ಹಳ್ಳಿಗರ ಬಾಯಲ್ಲಿ 'ದೊಡ್ಡ ಕಾವಲು' ಎಂದು ಕರೆಸಿಕೊಳ್ಳುವ ಸಾವಿರಾರು ಎಕರೆ ಪ್ರದೇಶದಲ್ಲಿ ಇಂದು ಕಂಗೊಳಿಸುತ್ತಿರುವ ಸಾವಿರಾರು ಗಿಡಮರಗಳು ಆಗಿನ ವಿದ್ಯಾರ್ಥಿಗಳ ಪರಿಶ್ರಮದ ಫಲ. ವಿದ್ಯಾರ್ಥಿಗಳೊಂದಿಗೆ ಗುರುವರ್ಯರೂ ದಿನವಿಡೀ ಇರುತ್ತಿದ್ದರು. ಯಾವ ಉದ್ಘಾಟನಾ ಭಾಷಣವೂ ಇರುತ್ತಿರಲಿಲ್ಲ. ಮಧ್ಯಾಹ್ನ ವಿದ್ಯಾರ್ಥಿಗಳಿಗೆ 'ವನಭೋಜನ'ದ ವಿರಾಮವನ್ನು ಬಿಟ್ಟರೆ ಬೆಳಗಿನಿಂದ ಸಂಜೆಯವರೆಗೆ ಗುಂಡಿಗಳನ್ನು ತೆಗೆದು ಸಸಿಗಳನ್ನು ನೆಡುವುದೇ ಪ್ರಮುಖ ಕಾರ್ಯಕ್ರಮ. ದೇಶಕ್ಕೆ ಸ್ವಾತಂತ್ರ್ಯ ಬಂದ ಆರಂಭದ ವರ್ಷಗಳಲ್ಲಿ ಬೇರೆಡೆ ಕಡ್ಡಾಯಕ್ಕಾಗಿ ಆಚರಿಸಿದ ವನಮಹೋತ್ಸವಗಳು 'ಒಣಮಹೋತ್ಸವ'ಗಳೆಂದು ಟೀಕೆಗೆ ಗುರಿಯಾದರೆ ಸಿರಿಗೆರೆಯ ವಿದ್ಯಾರ್ಥಿಗಳು ಸ್ವತಃ ಬೆಳೆಸಿದ ಗಿಡಮರಗಳ ಹಣ್ಣುಗಳನ್ನು ತಿಂದು ಕುಣಿದು ಕುಪ್ಪಳಿಸಿ 'ಫಲಮಹೋತ್ಸವ'ವನ್ನು ಆಚರಿಸುತ್ತಿದ್ದರು! ಈಗ ಆ ದೊಡ್ಡ ಕಾವಲು ವಿದ್ಯಾರ್ಥಿಗಳ ಬಾಯಲ್ಲಿ 'ಶಿವಕುಮಾರ ವನ'ವೆಂದೇ ಪ್ರಖ್ಯಾತವಾಗಿದೆ.

ಈ ಬ್ರಹ್ಮಾಂಡದಲ್ಲಿ ಬೇರೆ ಯಾವ ಗ್ರಹ ನಕ್ಷತ್ರಗಳಲ್ಲಿಯೂ ಇದುವರೆಗೂ ವಿಜ್ಞಾನದ ಕಣ್ಣುಗಳಿಗೆ ಕಾಣಸಿಗದ ಅತ್ಯದ್ಭುತ ಜೀವರಾಶಿ, ಪ್ರಾಣಿಸಂಕುಲ, ಖಗಮೃಗ, ಸಸ್ಯಸಂಪತ್ತು ಈ ಭೂಮಿಯ ಮೇಲಿದೆ. ಮನುಷ್ಯನಂತೆ ಇತರ ಜೀವಿಗಳಿಗೂ ಈ ಭೂಮಿಯ ಮೇಲೆ ಜೀವಿಸಲು ಹಕ್ಕು ಇದೆ. ಅವುಗಳಿಗೆ ಜೀವಭಯ ಉಂಟಾದಾಗ ಸಂಘಟನೆಯೇನೋ ಇದೆ; ಆಪಾಯದ ಸಂದರ್ಭದಲ್ಲಿ ಒಟ್ಟಾಗಿ ಧಾಳಿ ಮಾಡುತ್ತವೆ. ಆದರೆ ಮನುಷ್ಯನಂತೆ ಸಂಘಸಂಸ್ಥೆಗಳನ್ನು ಸ್ಥಾಪಿಸಿಕೊಂಡು ಹೋರಾಡುವಷ್ಟು ಬುದ್ಧಿಚಾತುರ್ಯ ಇಲ್ಲ. ಕಾಡು ಪ್ರಾಣಿಗಳನ್ನು ಕ್ರೂರ ಎನ್ನುತ್ತೇವೆ. ಆದರೆ ಅವುಗಳನ್ನು ಕ್ರೂರವೆಂದು ಕರೆಯುವುದೇ ಒಂದು ದೊಡ್ಡ ಕ್ರೌರ್ಯ. ಈ ಸೃಷ್ಟಿಗೆ ಅವುಗಳಿಂದ ಯಾವ ಅನ್ಯಾಯವೂ ಆಗಿಲ್ಲ. ಸೃಷ್ಟಿಯ ಕಿರೀಟವೆನ್ನಿಸಿಕೊಂಡ ಮನುಷ್ಯ ಇಂದು ಇಡೀ ಜಗತ್ತಿಗೆ ಕಂಟಕವಾಗಿ ಪರಿಣಮಿಸಿದ್ದಾನೆ. ಈ ಭೂಮಿ, ಗಾಳಿ, ನೀರು, ಆಕಾಶ, ಸಾಗರ ಇವೆಲ್ಲವೂ ದೇವರು ಎಲ್ಲ ಜೀವಿಗಳಿಗೂ ನೀಡಿದ ದೇಣಿಗೆ. ಆದರೆ "ಚಂದಿರನ ಮೆಟ್ಟುವ, ತಾರೆಗಳ ಮೀಟುವ" ಬುದ್ಧಿಬಲವಿರುವ ಮನುಷ್ಯ ಇಡೀ ಸೃಷ್ಟಿ ಇರುವುದೇ ತನ್ನ ಉಪಭೋಗಕ್ಕಾಗಿ ಎಂದು ಭಾವಿಸಿದ್ದಾನೆ. ನೆಲ, ಜಲ, ಆಗಸಗಳನ್ನೆಲ್ಲಾ

ಆಕ್ರಮಿಸುತ್ತಾ ಸುಖದ ಭ್ರಮೆಯಲ್ಲಿ ಓಲಾಡುತ್ತಾ ತನ್ನ ಸುತ್ತ ನರಕಗಳನ್ನು ಸೃಷ್ಟಿಸಿಕೊಂಡಿದ್ದಾನೆ, ಪಾಪದ ವೈತರಣಿಯನ್ನು ಹರಿಯಬಿಟ್ಟಿದ್ದಾನೆ.

**ಪುಣ್ಯಸ್ಯ ಫಲಮಿಚ್ಛಂತಿ ಪುಣ್ಯಂ ನೇಚ್ಛಂತಿ ಮಾನವಾಃ ।**
**ಪಾಪಸ್ಯ ಫಲಂ ನೇಚ್ಛಂತಿ ಪಾಪಂ ಕುರ್ವಂತಿ ಯತ್ನತಃ ॥**

ಜನರಿಗೆ ಪುಣ್ಯದ ಫಲ ಮಾತ್ರ ಬೇಕು. ಆದರೆ ಪುಣ್ಯ ಕಾರ್ಯ ಮಾಡಲು ಮನಸ್ಸಿಲ್ಲ. ಅವರಿಗೆ ಪಾಪದ ಫಲ ಬೇಡ, ಆದರೆ ಪಾಪದ ಕಾರ್ಯ ಮಾಡುವುದನ್ನು ಮಾತ್ರ ಬಿಡಲೊಲ್ಲರು!

ಹಿಂದಿನ ಆಳರಸರಾದ ನಾಲ್ವಡಿ ಕೃಷ್ಣರಾಜೇಂದ್ರ ಒಡೆಯರ್ ಅವರ ಕಾಲದಲ್ಲಿ ಜನರು ಧರ್ಮಬುದ್ಧಿಯಿಂದ ರಸ್ತೆಬದಿಗಳಲ್ಲಿ ಮರಗಳನ್ನು ಬೆಳೆಸುತ್ತಿದ್ದರು. ಈಗಿನಂತೆ ಆಗ ನೀರು ಹಾಕಲು ಟ್ಯಾಂಕರ್‌ಗಳಿರಲಿಲ್ಲ, ನಾಗರಿಕ ಅನುಕೂಲಗಳಿರಲಿಲ್ಲ. ಆದರೂ ಅವರು ಎಲ್ಲ ಕಷ್ಟಕಾರ್ಪಣ್ಯಗಳನ್ನು ಹೊತ್ತು ನಿಃಸ್ವಾರ್ಥದಿಂದ ಧರ್ಮಕಾರ್ಯಗಳನ್ನು ಮಾಡಿದರು. ದಾರಿ ಹೋಕರ ನೆತ್ತಿ ತಂಪಾಗಿರಲಿ ಎಂಬ ಧರ್ಮ ಬುದ್ಧಿಯಿಂದ ಉರಿ ಬಿಸಿಲಿನಲ್ಲಿ ನೀರನ್ನು ಹೊತ್ತು ಗಿಡಗಳಿಗೆ ಉಣಿಸಿದರು. ಆ ಮರಗಳ ನೆರಳಿನಲ್ಲಿ ಅವರೇನೂ ನಿಲ್ಲಲಿಲ್ಲ, ಅವುಗಳ ಹಣ್ಣುಗಳನ್ನೇನೂ ಮೆಲ್ಲಲಿಲ್ಲ. ತಮ್ಮ ಪುಣ್ಯದ ಫಲದ ತಿಲಾಂಶವನ್ನೂ ಉಣ್ಣದೆ ಅವರು ಇಹದ ಬದುಕನ್ನು ಮುಗಿಸಿದರು. ಇಂದಿನ ಜನರು ಹಿಂದಿನ ಆ ಮಹಾನುಭಾವರು ಮಾಡಿದ ಪುಣ್ಯದ ಫಲವನ್ನು ಉಣ್ಣುತ್ತಿದ್ದಾರೆ. ಗಿಡ ನೆಡುವ ಬೆಳೆಸುವ ಕಾರ್ಯವನ್ನು ಮಾಡುತ್ತಿಲ್ಲ. ಹಿಂದಿನವರು ಬೆಳೆಸಿದ ಮರಗಳನ್ನು ಕಡಿದು ಉರುಳಿಸುವ "ಮಹಾಪುಣ್ಯದ" ಕಾರ್ಯವನ್ನು ಮಾತ್ರ ಅತ್ಯಂತ "ನಿಷ್ಠೆ"ಯಿಂದ ಮಾಡುತ್ತಿದ್ದಾರೆ! ಅಪ್ಪ ನೆಟ್ಟ ಹುಣಿಸೇಮರದ ಫಲಕ್ಕಾಗಿ ಅಣ್ಣತಮ್ಮಂದಿರು ಬಡಿದಾಡಿ ಸಾಯುತ್ತಿದ್ದಾರೆ. ಅವರ ಜೀವನದಲ್ಲಿ ಯಾವ 'ಹುಣಿಸೇ ಹಣ್ಣೂ' ಇಲ್ಲ. ಇದ್ದರೆ ಹುಣಿಸೇ ಮರ ಮುಪ್ಪಾದರೂ ಹುಳಿ ಮುಪ್ಪಾಗುವುದಿಲ್ಲವೆಂಬಂತೆ ದ್ವೇಷ, ಅಸೂಯೆ, ಅಹಂಕಾರಗಳಿಂದ ಹಾಳಾಗುತ್ತಿದ್ದಾರೆ.

ನಮ್ಮ ದೇಶದ ಮಟ್ಟಿಗೆ ಹೇಳುವುದಾದರೆ ಬೆಳೆಯುತ್ತಿರುವ ಜನ ಸಂಖ್ಯೆಯಿಂದ ಕಾಡುಗಳು ದಿನೇ ದಿನೇ ಕಣ್ಮರೆಯಾಗುತ್ತಿವೆ. ಕಾಡುಗಳಲ್ಲಿ ವಾಸಿಸುವ ಜೀವಜಂತುಗಳು ನಾಮಾವಶೇಷವಾಗುತ್ತಿವೆ. ಕೈಗಾರಿಕಾ ಬೆಳವಣಿಗೆ ದೇಶದ ಪ್ರಗತಿಗೆ ಅಗತ್ಯವಾದರೂ ಕಾರ್ಖಾನೆಗಳು ಹೊರಚೆಲ್ಲುವ ಕಶ್ಮಲಗಳಿಂದ ನದಿಗಳು ಮಲಿನಗೊಳ್ಳುತ್ತಿವೆ. "ಗಂಗಾಸ್ನಾನ, ತುಂಗಾಪಾನ" ಎಂದು ಹಿರಿಯರು ಹೇಳುತ್ತಿದ್ದರು. ಆದರೆ ಈಗ ಪಾವನ ಗಂಗೆಯ ಜಲ ಮಲಿನವಾಗಿದೆ. ಅಲ್ಲಿ ಸ್ನಾನ ಮಾಡಿದರೆ ಚರ್ಮರೋಗಗಳು ಬರುವಂತಾಗಿದೆ. ತುಂಗೆಯ ನೀರು ಕುಡಿದವರನ್ನು ನಾನಾ ರೋಗಗಳು ಕಾಡಿಸುವಂತಾಗಿದೆ. ಕಾರ್ಖಾನೆಗಳು ಜೀವಜಾಲಕ್ಕೆ ಗಂಡಾಂತರಕಾರಿಯಾದ ತ್ಯಾಜ್ಯ ವಸ್ತುಗಳನ್ನು ಈ ನದಿಗಳಿಗೆ ಅಹರ್ನಿಶಿ ಸೇರಿಸುತ್ತಿವೆ.

ಕಾಡಿನ ವಿನಾಶ ಅವ್ಯಾಹತವಾಗಿ ಸಾಗಿದೆ. ಮನುಷ್ಯನ ಧನದಾಹದಿಂದ ಕಾಡುಗಳು ಬೋಳಾಗುತ್ತಿವೆ. ದನಕರುಗಳು ಮೇಯಲು ನಮ್ಮ ಹಿರಿಯರು ಕಾಯ್ದಿರಿಸಿದ್ದ ಗೋಮಾಳಗಳನ್ನೇ ಜನ ಈಗ ಮೇದು ಮುಗಿಸಿದ್ದಾರೆ. ಹಳ್ಳಿಗಳಲ್ಲಿ ದನಗಳಿಗೆ ಮೇಯುವುದಕ್ಕಿರಲಿ, ನಿಲ್ಲಲೂ ಸಹ ನೆಲ ಸಿಗದೆ ಗೋಮಾಳಗಳೆಲ್ಲಾ "ಗುಳುಂ ಮಾಳ"ಗಳಾಗಿವೆ. ಮೈಸುಟ್ಟುಕೊಂಡ ಮನುಷ್ಯನ ಕರುಣಾಜನಕ ಸ್ಥಿತಿಗೆ ನಮ್ಮ ಭೂಮಿ ತಲುಪಿದೆ. ದೇಹದ ಮೂರನೇ ಒಂದು ಭಾಗಕ್ಕಿಂತ ಹೆಚ್ಚು ಮೈ ಚರ್ಮ ಸುಟ್ಟುಹೋದರೆ ಮನುಷ್ಯ ಬದುಕಲಾರ. ಹಾಗೆಯೇ ಭೂಮಿಯ ಮೂರನೇ ಒಂದು ಭಾಗಕ್ಕಿಂತ ಕಾಡು ಕಡಿಮೆಯಾದರೆ ಈ ಭೂಮಿ ಬದುಕಲಾರದು. ಪ್ರತಿಕೂಲ ಹವಾಮಾನಕ್ಕೆ ಸಿಕ್ಕು ಡೋಲಾಯಮಾನವಾದ ವಿಮಾನ ಎಲ್ಲಿ ಉರುಳಿ ಬೀಳುವುದೋ ಎಂದು ಭಯಭೀತಿಗೊಳ್ಳುವ ಪ್ರಯಾಣಿಕರು ಭೂಮಿಗೆ ಇಳಿದಮೇಲೂ ಅಂತಹ ವಾತಾವರಣವೇ ಭೂಮಿಯ ಮೇಲೂ ಇದೆಯೆಂಬುದನ್ನು ಮನಗಾಣುತ್ತಿಲ್ಲ. "ಕಾಡು ಬೆಳಸಿ, ನಾಡು ಉಳಿಸಿ" ಎಂಬ ಘೋಷಣಾ ಫಲಕಗಳು ದಾರಿಯುದ್ದಕ್ಕೂ ಕಾಣಿಸುತ್ತವೆ. ಆದರೆ ಅವುಗಳನ್ನು ನೋಡಿ ಯಾರು ಆ ಮಾತಿನಂತೆ ನಡೆಯುವವರಿದ್ದಾರೆ? ಸಿಗರೇಟು ಪ್ಯಾಕುಗಳ ಮೇಲೆ "Smoking is injurious to health" ಎಂದು ಬರೆದಿದ್ದರೂ ಸಿಗರೇಟು ಸೇದುವುದನ್ನು ಬಿಡದ ಜನರಿಗೆ ಯಾವ ಉಪದೇಶ ತಾನೆ ಹಿಡಿಸುತ್ತದೆ? ಪ್ರತಿ ವರ್ಷ ಗಿಡ ನೆಡಲು ಅತಿ ಪ್ರಚಾರ ಕಂಡು ಬರುತ್ತಿದೆ, ಅಬ್ಬರದ ಕಾರ್ಯ ನಡೆಯುತ್ತದೆ. ಆದರೆ ಕಾಡು ಬೆಳೆದಿದೆಯೆ? ಎಂದರೆ ಇಲ್ಲ ಎಂದೇ ಹೇಳಬೇಕು.

ಪರಿಸರ ವಿನಾಶ ಹೀಗೇ ಸಾಗಿದರೆ ಏನಾದೀತು? "ಸುಜಲಾಂ, ಸುಫಲಾಂ, ಮಲಯಜ ಶೀತಲಾಂ" ಎಂದು ಮುಂತಾಗಿ ಹಾಡುವ ಎಳೆಯ ಪೀಳಿಗೆಯ ಕೈಗಳಿಗೆ ಈ ದೇಶವನ್ನು ಸಂಪೂರ್ಣ ಬಂಜರನ್ನಾಗಿಸಿ ಬರಡು ಭೂಮಿಯನ್ನು ಕೊಡುವ ಪೈಶಾಚಿಕ ಕೃತ್ಯವೇ ಈ ನಾಡಿನಲ್ಲಿ ನಡೆದಿದೆ. ಪ್ರಕೃತಿಯಲ್ಲಿ ಮನುಷ್ಯನ ಅವಶ್ಯಕತೆಗಳಿಗೆ ಬೇಕಾಗುವಷ್ಟು ಎಲ್ಲವೂ ಇದೆ. ಆದರೆ ಅವನ ದುರಾಸೆಯನ್ನು ಪೂರೈಸಲು ಸಾಧ್ಯವಾಗುವಷ್ಟು ಯಾವುದೂ ಇಲ್ಲ.

ಮನುಷ್ಯ ಕಾಡನ್ನು ಬೆಳೆಸುವುದಿರಲಿ, ನಾಶಪಡಿಸದಿದ್ದರೆ ಸಾಕು. ಅದಕ್ಕೆ ಸದಾ ತನ್ನಷ್ಟಕ್ಕೆ ತಾನೇ ಬೆಳೆಯುವ ಶಕ್ತಿ ಇದೆ. "ಬೆಟ್ಟದಾ ತುದಿಯಲ್ಲಿ ಹುಟ್ಟಿರುವ ವೃಕ್ಷಕ್ಕೆ ಕಟ್ಟೆಯನು ಕಟ್ಟಿ ನೀರೆರೆದವರು ಯಾರೋ?" ಎಂದು ಕೇಳುತ್ತಾರೆ ಪುರಂದರದಾಸರು. "ಇಳೆ ನಿಮ್ಮ ದಾನ, ಬೆಳೆ ನಿಮ್ಮ ದಾನ, ಸುಳಿದು ಬೀಸುವ ಗಾಳಿ ನಿಮ್ಮ ದಾನ" ಎನ್ನುತ್ತಾರೆ ದೇವರ ದಾಸಿಮಯ್ಯನವರು. ದೇವರ ದಾನವಾದ ಈ ಸೃಷ್ಟಿಯನ್ನು ಹಿತಮಿತವಾಗಿ ಉಪಭೋಗಿಸಿ, ಬೆಳೆಸಿ, ಜೋಪಾನವಾಗಿ ಕಾಪಾಡಿ ಮುಂದಿನ ಪೀಳಿಗೆಗೆ ಕೊಡಬೇಕಾದುದು ಎಲ್ಲರ ಆದ್ಯ ಕರ್ತವ್ಯ.

ಜನರು ತಮ್ಮ ಶರೀರವನ್ನು, ಬಟ್ಟೆ ಬರೆಗಳನ್ನು, ಮನೆಯ ಒಳಭಾಗವನ್ನು ಶುಚಿಯಾಗಿ ಇಡಲು ಪ್ರಯತ್ನಿಸುತ್ತಾರೆ. ಆದರೆ ತಮ್ಮ ಮನೆಯ ಸುತ್ತಲಿನ ಪರಿಸರ ಹೇಗಿದೆ, ತಮ್ಮ ಕೇರಿ ಹೇಗಿದೆ, ತಮ್ಮ ಊರು ಹೇಗಿದೆ ಎಂದು ಯೋಚಿಸುವುದಿಲ್ಲ. ಸಾರ್ವಜನಿಕ ಸ್ಥಳಗಳಾದ ಶಾಲೆ, ಬಸ್ ನಿಲ್ದಾಣ, ಕೊಳವೆ ಬಾವಿ ಇತ್ಯಾದಿಗಳು ಹೇಗಿದ್ದರೂ ಅವರು ತಲೆ ಕೆಡಿಸಿಕೊಳ್ಳುವುದಿಲ್ಲ. "ಊರ ಚಿಂತೆ ಕಟ್ಟಿಕೊಂಡು ನನಗೇನು?" ಎಂಬ ಭಾವನೆ ಬಹಳ ಜನರಲ್ಲಿದೆ. ಕೊಳವೆ ಬಾವಿಯ ಸುತ್ತ ನೀರು ನಿಂತು ಕೊಚ್ಚೆಯಾಗಿ ಕೊಳೆತು ನಾರುವಂತಾದರೂ ಯಾರೂ ಚಿಂತಿಸುವುದಿಲ್ಲ. ಸಾರ್ವಜನಿಕರ ಈ ನಿಷ್ಕಾಳಜಿಯನ್ನೇ ಬಂಡವಾಳವನ್ನಾಗಿ ಮಾಡಿಕೊಂಡ ಸ್ವಾರ್ಥಿಗಳಾದ ಬಲಾಢ್ಯರು ಸಾರ್ವಜನಿಕ ಸೊತ್ತುಗಳನ್ನು ಆಕ್ರಮಿಸಿಕೊಳ್ಳುತ್ತಿದ್ದಾರೆ, ಹಾಳುಗೆಡವುತ್ತಿದ್ದಾರೆ.

ವಾಯು ಮಾಲಿನ್ಯ ಇಂದು ಎಲ್ಲ ಎಲ್ಲೆಗಳನ್ನು ದಾಟಿ ನಿಂತಿದೆ. ಕಾರ್ಖಾನೆಗಳು ಉಗುಳುವ, ವಾಹನಗಳು ಹೊರಚೆಲ್ಲುವ ವಿಷಾನಿಲಗಳು ಸಾರ್ವಜನಿಕ ಆರೋಗ್ಯಕ್ಕೆ ಅತಿ ದೊಡ್ಡ ಬೆದರಿಕೆ ಒಡ್ಡಿ ನಿಂತಿವೆ. ಪಟ್ಟಣಗಳಲ್ಲಿ ಉಸಿರಾಡಲು ಶುದ್ಧ ಗಾಳಿ ಸಿಗದಂತಾಗಿದೆ, ಕುಡಿಯಲು ಶುದ್ಧ ನೀರು ಸಿಗದಂತಾಗಿದೆ. ಆಸ್ಪತ್ರೆಗಳಲ್ಲಿ ಕಾಲಿಡಲು ತೆರಪಿಲ್ಲದಂತೆ ರೋಗಿಗಳು ತುಂಬಿಕೊಳ್ಳುತ್ತಿದ್ದಾರೆ. ಭೂಮಿಯ ತಾಪಮಾನ (global warming) ಹೆಚ್ಚಲು ವಿಮಾನ ಮತ್ತು ವಾಹನಗಳಿಂದ ಹೊರಹೊಮ್ಮುವ ಹೊಗೆಗಿಂತ ಕಾಡಿನ ನಾಶವೇ ಹೆಚ್ಚು ಕಾರಣವೆಂದು ವಿಜ್ಞಾನಿಗಳು ಹೇಳುತ್ತಾರೆ. ಇತ್ತೀಚಿನ ವೈಜ್ಞಾನಿಕ ಸಮೀಕ್ಷೆ ಪ್ರಕಾರ ಪ್ರತಿವರ್ಷವೂ ಆಗುತ್ತಿರುವ ಅರಣ್ಯನಾಶದಿಂದ ಎರಡು ಬಿಲಿಯನ್ ಟನ್ ಭಾರದಷ್ಟು ಕಾರ್ಬನ್ ಡೈಯಾಕ್ಸೈಡ್ (CO2) ಅನಿಲವು ಹೊರಹೊಮ್ಮಿ ವಾತಾವರಣವನ್ನು ಕಲುಷಿತಗೊಳಿಸುತ್ತಿದೆ.

ಈ ಹಿನ್ನೆಲೆಯಲ್ಲಿ ಸರಕಾರವು ಅಧಿಕಾರಿಗಳ ಹಿತ ಕಾಪಾಡಲು ಇದೆಯೋ ಅಥವಾ ಜನರ ಹಿತ ಕಾಪಾಡಲು ಇದೆಯೋ ಎಂಬುದು ಯಕ್ಷಪ್ರಶ್ನೆಯಾಗಿದೆ. ಅರಣ್ಯ ಇಲಾಖೆಯನ್ನೇ ತೆಗೆದುಕೊಂಡರೆ ಅರವತ್ತರ ದಶಕದಲ್ಲಿ ಇಡೀ ರಾಜ್ಯಕ್ಕೆ ಒಬ್ಬ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (CCF) ಇದ್ದರು. ಅವರೇ ರಾಜ್ಯದ ವರಿಷ್ಠ ಅಧಿಕಾರಿಯಾಗಿದ್ದರು. ಅವರ ಮೇಲೆ ಯಾರೂ ಇರಲಿಲ್ಲ. ಈಗ 13 ಜನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು (CCF) ಇದ್ದಾರೆ. ಅವರ ಮೇಲೆ 5 ಜನ ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು (APCCF) ಇದ್ದಾರೆ. ಅವರೂ ಸಾಲದೆಂಬಂತೆ ಮತ್ತೆ ಅವರ ಮೇಲೆ ಇಬ್ಬರು ಪ್ರಧಾನ ಮುಖ್ಯ ಅರಣ್ಯಸಂರಕ್ಷಣಾಧಿಕಾರಿಗಳು (PCCF) ಇದ್ದಾರೆ. ಹೀಗೆ ಅರಣ್ಯ ಇಲಾಖೆಯ ಹುದ್ದೆಗಳನ್ನು ಹೊಸ ಹೊಸದಾಗಿ ಸೃಷ್ಟಿಸುತ್ತಾ ಮುಂದೆ ಇಂಗ್ಲೀಷ್ ವರ್ಣಮಾಲೆಯ ಉಳಿದ ಅಕ್ಷರಗಳೂ ಸೇರುತ್ತಾ ಹೋದರೆ ಆಶ್ಚರ್ಯವಿಲ್ಲ. ಇಷ್ಟೆಲ್ಲಾ ದೊಡ್ಡ ದೊಡ್ಡ ಅಧಿಕಾರಿಗಳು ಇದ್ದರೂ ಅರಣ್ಯಪ್ರದೇಶದ ಪರಿಸ್ಥಿತಿ ಏನಾಗಿದೆ? ಹಿಂದೆ ಒಬ್ಬ CCF ಇದ್ದಾಗ ನಮ್ಮ ರಾಜ್ಯದಲ್ಲಿ ಶೇಕಡ 20 ರಷ್ಟು ಅರಣ್ಯ ಪ್ರದೇಶ ಇತ್ತು. ಆದರೆ ಈಗ ಅರಣ್ಯಪ್ರದೇಶ ಶೇಕಡ 18 ರಷ್ಟು ಇದೆ. ದೊಡ್ಡ ದೊಡ್ಡ ಹುದ್ದೆಗಳು ಭರ್ತಿಯಾಗಿವೆ, ಅರಣ್ಯವನ್ನು ಕಾಯಬೇಕಾದ 'ಅರಣ್ಯರಕ್ಷಕ' ಹುದ್ದೆಗಳು ಮಾತ್ರ ಸಾವಿರಾರು ಖಾಲಿ ಇವೆ. ಅಂದರೆ ಮೇಲ್ದರ್ಜೆಯ ಹುದ್ದೆಗಳು ಭರ್ತಿಯಾಗಿವೆ, ಕೆಳದರ್ಜೆಯ ಹುದ್ದೆಗಳು ಖಾಲಿ ಇವೆ. ಈ ವಿಲಕ್ಷಣ ಪರಿಸ್ಥಿತಿಯನ್ನು ನೋಡಿದಾಗ ಒಂದು ಪ್ರಶ್ನೆ ಹುಟ್ಟುತ್ತದೆ. ಉನ್ನತ ದರ್ಜೆಯ ಅಧಿಕಾರಿಗಳ ಸಂಖ್ಯೆ ಹೆಚ್ಚಿದಂತೆ ಅರಣ್ಯ ಪ್ರದೇಶ ಕಡಿಮೆಯಾಗುತ್ತಾ ಬಂದಿದೆಯೋ, ಅರಣ್ಯ ಪ್ರದೇಶ ಕಡಿಮೆಯಾದಂತೆ ಉನ್ನತ ದರ್ಜೆಯ ಅಧಿಕಾರಿಗಳ ಸಂಖ್ಯೆ ಹೆಚ್ಚುತ್ತಾ ಬಂದಿದೆಯೋ. ಲೋಕಾಯುಕ್ತರೇ ತನಿಖೆ ನಡೆಸಿ ಹೇಳುವುದೊಳಿತು.

ಸಹೃದಯ ಓದುಗರೇ! ದಿನವೂ ನಾಡಿನ ಪ್ರಾಕೃತಿಸಂಪತ್ತು ಕೊಳ್ಳೆಹೋಗುತ್ತಿರುವ ಬಗ್ಗೆ ಕೂಗು ಎದ್ದಿರುವ ಈ ಸಂದರ್ಭದಲ್ಲಿ ಖಲೀಲ್ ಗಿಬ್ರಾನ್ ಬರೆದ ಈ ಮುಂದಿನ ಮಾತುಗಳು ತುಂಬಾ ಮನನೀಯವಾಗಿವೆ:

> Trees are poems the earth writes upon the sky
> We fell them down and turn them into paper
> That we may record our emptiness!

ನಿಸರ್ಗವು ಆಕಾಶದ ಹಾಳೆಯಲ್ಲಿ
ಬರೆದ ಸುಂದರ ಪದ್ಯಗಳೇ ಮರಗಳು!
ನಾವು ಅವುಗಳನ್ನು ಕಡಿದು ಕಾಗದ ತಯಾರಿಸುತ್ತೇವೆ
ಏತಕ್ಕೆ? ನಮ್ಮ ಪೊಳ್ಳುತನವನ್ನು ದಾಖಲಿಸಲಿಕ್ಕೆ !

28.7.2010

ಶ್ರೀ ತರಳಬಾಳು ಜಗದ್ಗುರು
ಡಾ|| ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳವರು
ಸಿರಿಗೆರೆ